# ಸೋನಂ ಮತ್ತೊಂದು 'ಬ್ರೇಕ್'




ಅನಿಲ್ ಕಪೂರ್ ಅವರ ಮುದ್ದಿನ ಮಗಳು ಸೋನಂ ಕಪೂರ್ ತಮ್ಮ ಪ್ರೇಮಕ್ಕೆ ತಿಲಾಂಜಲಿ ಇರಿಸಿದ್ದಾರೆ. ರೂಪದರ್ಶಿ, ಸಾಹಸೋದ್ಯಮಿ ಸಾಹಿರ್ ಬೆರ್ರಿ ಜತೆ ಸೋನಂ ಪ್ರೇಮ ಪ್ರಸಂಗ ಕೊನೆಗೊಂಡಿದೆ ಎನ್ನುವುದು ಈಗ ಬಹಿರಂಗವಾಗಿದೆ. ಇಬ್ಬರೂ ಬೇರಾಗುವುದಕ್ಕೆ ಸಮಯದ ಕೊರತೆಯೇ ಕಾರಣವಂತೆ.

ಉದ್ಯಮಿಯಾಗಿರುವ ಸಾಹಿರ್ ದೆಹಲಿ, ಲಂಡನ್, ಗೋವಾಗಳ ನಡುವಿನ ಓಡಾಟದಲ್ಲೇ ಬ್ಯುಸಿ. ಸೋನಂ ಜತೆ ಸಾಹಿರ್ ಕಾಣಿಸಿಕೊಂಡಿದ್ದೂ ಕಡಿಮೆಯೇ. ಜೂನ್‌ನಲ್ಲಿ ಸೋನಂ ಜನ್ಮದಿನದ ಸಂತೋಷ ಕೂಟದಲ್ಲಿ ಕಾಣಿಸಿಕೊಂಡಿದ್ದೇ ಮೊದಲು ಮತ್ತು ಕೊನೆ. ಒಂದು ಮೂಲದ ಪ್ರಕಾರ ಸೋನಂ ಮತ್ತು ಸಾಹಿರ್ ತಮ್ಮ ಸಂಬಂಧವನ್ನು ಉಳಿಸಿಕೊಳ್ಳಲು ಸಾಕಷ್ಟು ಪ್ರಯತ್ನಿಸಿದ್ದರಂತೆ. ಆದರೆ ಜತೆಯಾಗಿರುವುದು ಸಾಧ್ಯವೇ ಇಲ್ಲ ಎಂದು ಖಚಿತವಾದ ಬಳಿಕ ಒಟ್ಟಿಗೇ ಕುಳಿತು ಮಾತನಾಡಿ ಬೇರೆಯಾಗುವ ತೀರ್ಮಾನ ಕೈಗೊಂಡಿದ್ದಾರಂತೆ. 'ನಿರಾಶೆಯ ಶುಭಾಂತ್ಯ' ಎನ್ನೋಣವೆ? ಸೋನಂ ಈ ಹಿಂದೆ ತನ್ನ ಮೊದಲ ಪ್ರೇಮಪ್ರಕರಣವನ್ನು ಮಾತನಾಡಿಯೇ ಕೊನೆಗೊಳಿಸಿದ್ದಳು. ಎಷ್ಟು ಒಳ್ಳೆಯ ಅಭ್ಯಾಸ!



# ರಣವೀರ್ ತಮಾಷೆ, ದೀಪಿಕಾ ಸಂಕಟ

ದೀಪಿಕಾ ನಟಿಸುವ ಚಿತ್ರದ ಶೂಟಿಂಗ್ ಸ್ಥಳಗಳಿಗೆ ರಣವೀರ್ ಸಿಂಗ್ ಭೇಟಿ ಕೊಡುವುದು ಮಾಮೂಲು. ಅದು ಸ್ವದೇಶದಲ್ಲೇ ಇರಲಿ, ವಿದೇಶದಲ್ಲೇ ಇರಲಿ; ಡಿಪ್ಸ್ ಇದ್ದಲ್ಲಿ ರಣವೀರ್ ಹಾಜರಿ ಇರಲೇಬೇಕು. ಸೆಟ್‌ನಲ್ಲಿದ್ದವರ ಕಣ್ಣುತಪ್ಪಿಸಿ ದೀಪಿಕಾರ ಕ್ಯಾರಾವಾನೊಳಗೆ ತೂರಿಕೊಳ್ಳುವುದರಲ್ಲಿ ರಣವೀರ್ ಪರಿಣತ. ಮಾಧ್ಯಮದವರ ಕಣ್ಣಿಗೆ ಬೀಳದಂತೆ ಅಲ್ಲಿಂದ ಪಾರಾಗುವುದೂ ಅವರಿಗೆ ಗೊತ್ತು.

ಆದರೆ ಈ ಬಾರಿ ರಣವೀರ್ ಸುದ್ದಿ ಮಾಡಿದ್ದಾರೆ. ಮಾತ್ರವಲ್ಲ, ದೀಪಿಕಾಗೆ ಮುಜುಗರವನ್ನೂ ಉಂಟು ಮಾಡಿದ್ದಾರೆ. 'ತಮಾಷಾ' ಚಿತ್ರತಂಡ ಕೋರ್ಸಿಕಾದಲ್ಲಿ ವಾಸ್ತವ್ಯ ಹೂಡಿದೆ. ಅಲ್ಲಿಗೆ ರಣವೀರ್ ಸಹ ತೆರಳಿದ್ದ. ಅಲ್ಲಿ ಹೋಟೆಲ್‌ನಲ್ಲಿ ಮಾತ್ರ ಗುಟ್ಟಾಗಿ ಭೇಟಿಯಾಗುತ್ತಿದ್ದ ರಣವೀರ್, ಚಿತ್ರೀಕರಣದ ಸ್ಥಳಕ್ಕೂ ಹೋಗಿದ್ದಾನೆ. ಮಾತ್ರವಲ್ಲ, ದೀಪಿಕಾ ನಟಿಸುವ ಸನ್ನಿವೇಶಕ್ಕೆ ಆ್ಯಕ್ಷನ್, ಕಟ್ ಸಹ ಹೇಳಿದ್ದಾನೆ.

ದೀಪಿಕಾ ನಟಿಸುವಾಗ ಮಾನಿಟರ್‌ನಲ್ಲಿ ಗಮನಿಸುತ್ತಿದ್ದ ರಣವೀರ್, ನಿರ್ದೇಶಕ ಇಮ್ತಿಯಾಜ್ ಅಲಿ ಕಟ್ ಹೇಳಿದಾಗ ಅವರಿಗೆ ಬಿಟ್ಟಿ ಸಲಹೆಗಳನ್ನು ನೀಡಿದ್ದಾನಂತೆ. ಪ್ರತಿ ಶಾಟ್ ಮುಗಿದಾಗಲೂ ಚಪ್ಪಾಳೆ ತಟ್ಟುತ್ತಾ ರಣವೀರ್ ದೀಪಿಕಾಗೆ ಹುರಿದುಂಬಿಸಿದನಂತೆ. ಪದೇ ಪದೇ ದೀಪಿಕಾ ಬಳಿ ಹೋಗಿ ನಟನೆಯನ್ನು ಹೇಗೆ ಸುಧಾರಿಸಿಕೊಳ್ಳಬಹುದು ಎಂದು ಟಿಪ್ಸ್‌ಗಳನ್ನು ನೀಡುತ್ತಿದ್ದನಂತೆ.

ರಣವೀರ್ ನಡವಳಿಕೆಯಿಂದ ಕಿರಿಕಿರಿಯಾದರೂ ನಿರ್ದೇಶಕ ಇಮ್ತಿಯಾಜ್ ಅಲಿ ಗಪ್‌ಚುಪ್ ಆಗಿದ್ದರಂತೆ. ದೀಪಿಕಾ ಕೂಡಾ ಮುಜುಗರವನ್ನು ಸಹಿಸಿಕೊಂಡಳಂತೆ. 'ತಮಾಷಾ'ದಲ್ಲಿ ದೀಪಿಕಾಗೆ ನಾಯಕ ಆಕೆಯ ಮಾಜಿ ಗೆಳೆಯ ರಣಬೀರ್ ಕಪೂರ್. ಆತ ಈ ಸಮಯದಲ್ಲಿ ವಿಶ್ರಾಂತಿಯಲ್ಲಿದ್ದನಂತೆ. ಇಲ್ಲದಿದ್ದರೆ ದೀಪಿಕಾರ ಪಾಡು ಇನ್ನೇನು ಆಗಿರುತ್ತಿತ್ತೋ ಎಂದು ಲೆಕ್ಕಾಚಾರ ಹಾಕುತ್ತಿದೆ ಬಿ–ಟೌನ್.

■ ಅಮಿ